**70** ವಿದೇಶಿ ಆಟಗಾರರು ಈ ಬಾರಿ ಐಪಿಎಲ್‌ನ ವಿವಿಧ ತಂಡಗಳಲ್ಲಿ




ಪರಿಶ್ರಮಕ್ಕೆ ಫಲ ಪಡೆದ ರಿಷಭ್ ಪಂತ್

## ಬಹುಬ್ರ್ಯಾಂಡ್‌ಗಳ ಅಚ್ಚುಮೆಚ್ಚು ಐಪಿಎಲ್

ಏಷ್ಯಾ ಖಂಡದ ಮಾರುಕಟ್ಟೆಗೆ ಪ್ರವೇಶಿಸುವ ಅಂತರರಾಷ್ಟ್ರೀಯ ಬ್ರ್ಯಾಂಡ್ ಕಂಪೆನಿಗಳಿಗೆ ಭಾರತ ಬಹುದೊಡ್ಡ ಮಾರುಕಟ್ಟೆ. ಅಷ್ಟೇ ವೈವಿಧ್ಯಮಯವಾದ ಮಾರುಕಟ್ಟೆಯೂ ಹೌದು. ಬಹುತೇಕ ಕಂಪೆನಿಗಳು ತಮ್ಮ ಉತ್ಪನ್ನಗಳ ಪ್ರಚಾರಕ್ಕಾಗಿ ಮೊದಲು ಕಣ್ಣು ಹಾಯಿಸುವುದು ಕ್ರಿಕೆಟ್‌ನತ್ತ. ಜನಸಂಖ್ಯೆಯಲ್ಲಿ ಬಹುಪಾಲು ಯುವಜನಾಂಗ ಹೊಂದಿರುವ ದೇಶದ ಜೀವನಾಡಿಯಂತಾಗಿರುವ ಕ್ರಿಕೆಟ್‌ನಿಂದ ಸಿಗುವ ಪ್ರಚಾರ ಉಳಿದೆಲ್ಲಕ್ಕಿಂತಲೂ ಹೆಚ್ಚು. ಅದರಲ್ಲೂ ಐಪಿಎಲ್ ಟೂರ್ನಿಗಳು ಬ್ರ್ಯಾಂಡ್ ಪ್ರಚಾರದ ಪ್ರಮುಖ ವೇದಿಕೆ. ಐಪಿಎಲ್ ಪ್ರಾಯೋಜಕತ್ವಕ್ಕಾಗಿ ನಾ ಮುಂದು, ತಾ ಮುಂದು ಎಂದು ಕಂಪೆನಿಗಳು ಮುಗಿ ಬೀಳುತ್ತಿವೆ. ಆದರಿಂದಾಗಿ ಬಿಸಿಸಿಐ ಮತ್ತು ಫ್ರಾಂಚೈಸ್‌ಗಳು ಕೋಟಿ ಕೋಟಿ ಹಣವನ್ನು ಬಾಚಿಕೊಳ್ಳುತ್ತಿವೆ. ಈ ಬಾರಿಯ ಪ್ರಮುಖ ಪ್ರಾಯೋಜಕ ವಿವೊ ಮೊಬೈಲ್ ಕಂಪೆನಿಯು ₹ 768 ಕೋಟಿ ವಿನಿಯೋಗಿಸಿದೆ

ಅಲ್ಲದೇ ಒಪ್ಪೊ ಮೊಬೈಲ್ ಸಂಸ್ಥೆಯು ಭಾರತ ಕ್ರಿಕೆಟ್ ತಂಡದ ಆಟಗಾರರ ಪೋಷಾಕು ಪ್ರಾಯೋಜಕತ್ವಕ್ಕಾಗಿ ಹತ್ತು ವರ್ಷಗಳ ಅವಧಿಗೆ ₹ 1079 ಕೋಟಿಯ ಒಪ್ಪಂದ ಮಾಡಿಕೊಂಡಿದೆ.

2015ರಲ್ಲಿ 22,197 ಕೋಟಿ ರೂಪಾಯಿ ಇದ್ದ ಐಪಿಎಲ್‌ನ ಬ್ರ್ಯಾಂಡ್‌ಮೌಲ್ಯವು 2016ರಲ್ಲಿ ₹ 26,943 ಕೋಟಿಗೆ ಏರಿಕೆಯಾಗಿತ್ತು. ಈ ಬಾರಿ ಇನ್ನೂ ಹೆಚ್ಚಾಗುವ ನಿರೀಕ್ಷೆ ಇದೆ.

ಉಳಿದ ಫ್ರಾಂಚೈಸ್‌ಗಳೂ ಉತ್ತಮ ಆದಾಯ ಗಳಿಸುತ್ತಿವೆ. ಬಿಸಿಸಿಐನಿಂದ ಸಿಗುವ ಲಾಭಾಂಶ, ಪ್ರಾಯೋಜಕತ್ವ, ಟಿಕೆಟ್ ಮಾರಾಟದ ಆದಾಯ, ಆಟಗಾರ ವಿಂಡೋ ಟ್ರೇಡಿಂಗ್ (ಬೇರೆ ತಂಡಗಳಿಗೆ ವರ್ಗಾವಣೆ), ಮಾರುಕಟ್ಟೆ ವಿನಿಯೋಜನೆ, ನಗದು ಬಹುಮಾನಗಳ ಮೂಲದಿಂದ ಲಾಭ ಪಡೆದಿವೆ.

2016ರಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ₹ 14.15 ಕೋಟಿ ಗಳಿಸಿತ್ತು. ಆದರೆ ಕೆಲವು ಫ್ರಾಂಚೈಸ್‌ಗಳು ತಮ್ಮ ಲಾಭದಲ್ಲಿ ಗಣನೀಯ ಇಳಿಕೆಯನ್ನು ತೋರಿಸಿದ್ದವು. ಆದರೆ ಈ ಬಾರಿ ಹೆಚ್ಚು ಆದಾಯ ಪಡೆಯುವ ನಿರೀಕ್ಷೆ ಹೊಂದಿವೆ.

ಒಂದು ಸುತ್ತು ಹಾಕಿದರೆ ಈ ಸತ್ಯ ಕಣ್ಣಿಗೆ ಕಾಣುತ್ತದೆ.

ಬ್ಯಾಟ್ ಹಿಡಿಯುವ ಬಹುತೇಕ ಹುಡುಗರು ಮೊದಲಿಗೆ ಸಿಕ್ಸರ್ ಹೊಡೆಯುವುದನ್ನೇ ಕಲಿಯುವತ್ತ ಧ್ಯಾನ ನೆಟ್ಟಿರುವುದು ಚುಟುಕು ಕ್ರಿಕೆಟ್‌ನ ಪ್ರಭಾವ. ಆದರೆ ಅವರನ್ನು ಕ್ರಿಕೆಟ್‌ನ ಮೂಲ ಹಾದಿಯಲ್ಲಿ ಸಿದ್ಧಗೊಳಿಸುವುದು, ತಾಳ್ಮೆ, ಕೌಶಲ್ಯಭರಿತ ಆಟಗಾರರನ್ನಾಗಿ ಮಾಡುವುದು ತರಬೇತುದಾರರಿಗೆ ದೊಡ್ಡ ಸವಾಲೇ ಆಗಿದೆ.

ಮುಖ್ಯವಾಗಿ ಐಪಿಎಲ್‌ನಲ್ಲಿರುವ ಹಣದ ಆಕರ್ಷಣೆಯು ಬಾಲ ಮತ್ತು ಯುವಪ್ರತಿಭೆಗಳನ್ನು ತನ್ನೆಡೆಗೆ ಸೆಳೆಯುತ್ತಿದೆ. ಕನಿಷ್ಠ 10 ಲಕ್ಷ ರೂಪಾಯಿಯ ಮೂಲಬೆಲೆ ಸಿಗುತ್ತಿರುವುದು ಹೊಸ ಹುಮ್ಮಸ್ಸು ಮೂಡಿಸಿದೆ. ಅಲ್ಲದೇ ಹನ್ನೊಂದರ ಪಟ್ಟಿಯಲ್ಲಿ ಅವಕಾಶ ಸಿಗದಿದ್ದರೂ ಅಂತರರಾಷ್ಟ್ರೀಯ ತಾರೆಗಳೊಂದಿಗೆ ತಂಡದಲ್ಲಿ ಇರುವ ಅನುಭವ ಮತ್ತು ಪ್ರಚಾರ ದೊಡ್ಡದು.

ಐದು ವರ್ಷಗಳ ಹಿಂದೆ ಕರುಣ್ ನಾಯರ್ ಕೂಡ ಇದೇ ರೀತಿಯಿದ್ದರು. ಆದರೆ, ಈಗ ಅವರು ಡೆಲ್ಲಿ ಡೇರ್‌ಡೆವಿಲ್ಸ್ ತಂಡದ ಪ್ರಮುಖ ಆಟಗಾರರಾಗಿ ಬೆಳೆದಿದ್ದಾರೆ. ರಣಜಿ, ಟೆಸ್ಟ್‌ನಲ್ಲಿಯೂ ಮಿಂಚಿದ್ದಾರೆ. ಅವರ ಹಾದಿಯಲ್ಲಿ ಸಾಗಲು ಧಾರವಾಡದ ಪವನ್ ದೇಶಪಾಂಡೆ, ಹುಬ್ಬಳ್ಳಿಯ ಕಿಶೋರ್ ಕಾಮತ್, ಸಿವಿಲ್ ಕೌಶಿಕ್ ಅವರಂತಹ ಉದಯೋನ್ಮುಖ ಆಟಗಾರರೂ ಪ್ರತಿಭೆ ಪಣಕ್ಕೊಡ್ಡಿದ್ದಾರೆ. ಅದಕ್ಕೆ




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ



ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450